(6) ಪ್ರಕಟಣೆಗಳು

ವಿಷಯ:- ಶ್ರೀ ಆರ್.ವಿ. ದೇಶಪಾಂಡೆ ಹಾಗೂ ಇತರರ ರಾಜೀನಾಮೆ ಅಂಗೀಕರಿಸಿರುವುದು.

ಅಧ್ಯಕ್ಷರು: ಈ ದಿನ ಬೆಳಿಗ್ಗೆ 23-6-99ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸದನ ಸಮಿತಿ ಸಭೆಯಲ್ಲಿ ಈ ಸಲದ ಅಧಿವೇಶನದ ಅವಧಿಯನ್ನು ದಿನಾಂಕ 9-7-99ರವರೆಗೆ ವಿಸ್ತರಿಸಲು ತೀರ್ಮಾನಿಸಲಾಗಿದೆ. ಈ ಅವಧಿಯಲ್ಲಿ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು ಶಾಸನ ರಚನೆ ಪ್ರಶ್ನೋತ್ತರ ವೇಳೆ ಇತರೆ ಚರ್ಚೆ ನಡೆಸಲು ಕಾರ್ಯಕಲಾಪಗಳ ಸದನ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ. ಸದನ ಇದಕ್ಕೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

10ನೇಯ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದ ಶ್ರೀ ಆರ್.ವಿ ದೇಶಪಾಂಡೆಯವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿದ್ದಾರೆ. ದಿನಾಂಕ2-6-99ಕ್ಕೆ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ. ಅದೇ ರೀತಿ ಪಿ.ಸಿ.ಸಿದ್ದನಗೌಡರ್, ಸಹ ರಾಜೀನಾಮೆ ನೀಡಿರುತ್ತಾರೆ. ದಿನಾಂಕ 21-6-99ರಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ. ಬಿ.ಆರ್. ಯಾವಗಲ್‌ರವರೂ ಸಹ ರಾಜೀನಾಮೆಯನ್ನು ನೀಡಿರುತ್ತಾರೆ ದಿನಾಂಕ 21-6-99ರಿಂದ ಜಾರಿಗೆ ಬರುವಂತೆ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಗುರುಪಾದಪ್ಪ ನಾಗಮಾರಪಲ್ಲಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುತ್ತಾರೆ ದಿನಾಂಕ 23-6-99 ರಿಂದ ಜಾರಿಗೆ ಬರುವಂತೆ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ.

(7) ನಿಲುವಳಿ ಸೂಚನೆ (ಅನುಮತಿ ಕೋರಿಕೆ)

ವಿಷಯ:-ಕರ್ನಾಟಕ ಸಹಕಾರ ಸಂಘಗಳ ಕಾಯಿದೆ (ತಿದ್ದುಪಡಿ) ವಿಧೇಯಕದ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ ಒಂದು ಮಹತ್ವದ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ, ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ ಸಾರ್, ಶರಣರೇ ಇಲ್ಲವೆಂದರೆ, ಅನುಭವ ಮಂಟಪ ನಡೆಯುವುದು ಹೇಗೆ? ಕರ್ನಾಟಕ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್‌ಗೆ ಮಾನ್ಯಮಂತ್ರಿಗಳು ಒಂದು..

MR.SPEAKER :- Now the understanding is limited. Mr.Kharge,ತಾವು ನಿಲುವಳಿ ಸೂಚನೆಯ ನಿಯಮಗಳಿಗನುಸಾರವಾಗಿ ಇದನ್ನು ಕೊಟ್ಟಿದ್ದೀರಿ. Actually, it doesn 't constitute a matter being raised under Adjournment Motion.

ವಿರೋಧಪಕ್ಷದ ನಾಯಕರಾಗಿ ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಾಗ the Chair has an obligation to permit you to raise. You can mention this matter in brief. Details not required. We will await the reply of the government. Then, we will decide as to whether we should take it up for a further discussion or to close it. You raise this matter. Let the government give its explanation.. If you are all collectively convinced that it needs further discussion, I am prepared to take up this matter for further discussion also.